ಹೊತ್ತಿನಲ್ಲಿ ನಿಧಾನವಾಗಿ ದೊಡ್ಡದಾಗುತ್ತ ತುಂತುರು ಹನಿಯತೊಡಗಿದವು. ಇನ್ನು ಸ್ವಲ್ಪ ಹೊತ್ತಿಗೆ ಮಳೆ.

ಆಕೆ ಇದ್ದಕ್ಕಿದ್ದಂತೆ ಹಾಡಿನ ವಾಲ್ಯೂಮು ಕಡಿಮೆ ಮಾಡಿ ಕತ್ತನ್ನು ಸ್ವಲ್ಪ ಹಿಂದಕ್ಕೆ ತಿರುಗಿಸುತ್ತ, 'ಚಿನ್ನೂ ಹಸಿವಾಗ್ತಿದೆಯಾ ಕಂದಾ? ಏನಾದ್ರೂ ತಿಂತಿಯಾ? ಬಿಸ್ಕೆಟ್ಸ್ ಇವೆ' ಅಂದಳು ಇಂಗ್ಲೀಷಿನಲ್ಲಿ.

ಚಿನ್ನು ಆ ಮಾತಿಗೆ ಎಳ್ಳಷ್ಟೂ ಪ್ರತಿಕ್ರಿಯೆ ಕೊಡದೆ ಮೊಬೈಲ್ ಫೋನಿನಿಂದ ದೃಷ್ಟಿಯನ್ನೂ ಕದಲಿಸದೆ 'ಬೇಡ' ಅಂದ ಇಂಗ್ಲೀಷಿನಲ್ಲಿ.

ಆಕೆ ಇಂಗ್ಲೀಷಿನಲ್ಲೇ ಮುಂದುವರೆಸಿದಳು. ಅವನು ಇಂಗ್ಲೀಷಿನಲ್ಲೇ ಉತ್ತರ ಕೊಡತೊಡಗಿದ.

'ಮಳೆ ನೋಡು ಕಂದಾ... ಹೊರಗೆ ಎಷ್ಟು ಚೆನ್ನಾಗಿದೆಯೋ ನೋಡು ಮರಿ.'

'ನೋಡಲ್ಲ.'

'ಗ್ಲಾಸು ಕೆಳಗಿಳಿಸಿ ಬೇಕೆಂದರೆ ಬೊಗಸೆಯಲ್ಲಿ ಮಳೆನೀರು ಹಿಡಿ, ಭಲೆ ಮಜವಾಗಿರುತ್ತೆ.'

'ಕಾಣಿಸ್ತಿಲ್ಲವಾ ನನ್ನ ಕೈಯಲ್ಲಿ ಮೊಬೈಲ್ ಫೋನ್ ಇದೆ.'

'ಕಂದಾ... ಹೇಳಿದ್ರೆ ಕೇಳಬೇಕು. ಕನಿಷ್ಠ ಮಳೆಯ ಸದ್ದಾದರೂ ಕೇಳೋ. ಕೀಬೋರ್ಡ್‌ನಲ್ಲಿ ರೇನ್ ಎಫೆಕ್ಟ್ ಇರುತ್ತೆ. ಮನೆಗೆ ಹೋದ ಮೇಲೆ ನೀನು ಟ್ರೈ ಮಾಡಬಹುದು.'

'ಮಮ್ಮೀ.'

'ಸರಿ ಬಿಡು.'

ಆಕೆ ಮ್ಯೂಸಿಕ್ ಆಫ್ ಮಾಡಿ ವೈಫರ್ಸ್ ಆನ್ ಮಾಡಿ ನನ್ನೊಂದಿಗೆ ಮಾತಿಗಿಳಿದಳು.

'ನೋಡೀ ಇದು ಸ್ಟೈಲ್ ಅಂತ ಅನ್ಕೋಬೇಡಿ. ನಮ್ಮ ಹುಡುಗನಿಗೆ ಚಿಕ್ಕ ಚಿಕ್ಕ ಪದಗಳು, ಸಣ್ಣಪುಟ್ಟ ವಾಕ್ಯಗಳು ಬಿಟ್ಟರೆ ತೆಲುಗು ಬರೋದೇ ಇಲ್ಲ. ಮನೆಯಲ್ಲೂ ಸ್ಕೂಲಲ್ಲೂ ಇಂಗ್ಲಿಷ್ ಮಾತಾಡಿ ಮಾತಾಡಿ ಕಡೆಗೆ ಅವನಿಗೆ ತೆಲುಗು ಇಲ್ಲದಂತೆ ಮಾಡಿಬಿಟ್ಟದೀವಿ' ಅಂದಳು.

ಮತ್ತೆ ಸ್ವಲ್ಪ ಹೊತ್ತಿಗೆ ತುಟಿ ತಿರುವುತ್ತ ಮತ್ತೆ ಶುರು ಹಚ್ಚಿಕೊಂಡಳು.

'ಈಗ ಅರ್ಥವಾಗ್ತಿದೇರಿ ಅದು ಎಂಥ ದೊಡ್ಡ ತಪ್ಪು ಅಂತ. ತಾಯಿ ಹೊಟ್ಟೆಯಲ್ಲಿ ಇದ್ದಾಗ ಕೇಳಿದ ಭಾಷೆಯಿಂದ ಮಗುವನ್ನು ದೂರ ಮಾಡೋದು ಎಂಥ ಅನ್ಯಾಯ ಅಂತ. ಆದರೇನು ಲಾಭ? ಎಲ್ಲ ಮುಗಿದುಹೋಗಿದೆ. ಈಗ ಅವನನ್ನು ಕಲಿತುಕೊಳ್ಳೋ ಅಂದ್ರೂ ಕಲಿತುಕೊಳ್ತಾ ಇಲ್ಲ. ಕಲಿತುಕೊಂಡರೂ ಅವನ ಸರ್ಕಲ್‌ನಲ್ಲಿ ಮಾತಾಡೋರು ಇಲ್ಲ. ನಿಮಗೆ ಹೇಳಿದ್ರೆ ನಂಬಲ್ಲ. ಆಗಾಗ ತುಂಬಾ ಆಶೆಯಾಗುತ್ತೆ. ಅವನಿಗೆ ತೆಲುಗು ಬಂದಿದ್ರೆ ಎಷ್ಟು ಚೆನ್ನಾಗಿತ್ತಲ್ಲ ಅಂತ. ಆಗ ಅವನಿಗೆ ನಾನು ಒಳ್ಳೊಳ್ಳೆ ತೆಲುಗು ಹಾಡುಗಳನ್ನು ಕೇಳಿಸಬಹುದಿತ್ತಲ್ಲ ಅಂತ. ಒಳ್ಳೊಳ್ಳೆ ತೆಲುಗು ಕೀರ್ತನೆಗಳ ಟೇಸ್ಟ್ ಗೊತ್ತು ಮಾಡಿಕೊಳ್ತಿದ್ದನಲ್ಲ ಅಂತ. ಅವುಗಳನ್ನು ಕೇಳಿಯಾದರೂ ಅವನೊಬ್ಬ ಒಳ್ಳೆ ಸಂಗೀತಗಾರನಾಗಿದ್ದರೆ ಚೆನ್ನಾಗಿರುತ್ತಿತ್ತಲ್ಲ... ಕನಸು...'

ಆಕೆ ಮಾತಾಡುತ್ತಲೇ ಇದ್ದಳು. ನಾನು ಹೊರಗೆ ನೋಡುತ್ತ ಕುಳಿತುಕೊಂಡಿದ್ದೆ.

ಹೊರಗೆ ಮಳೆ ತೆರೆ ತೆರೆಯಾಗಿ ಸುರಿಯುತ್ತಿದೆ. ಮೇಲಿನಿಂದ ಹನಿಗಳು ಜೋರಾಗಿ ಬಂದು ರಸ್ತೆಯ ಮೇಲೆ ಬಿದ್ದು ಒಡೆದುಹೋಗುತ್ತಿವೆ. ಬರುವ ಹೋಗುವ ವಾಹನಗಳ ಲೈಟುಗಳು ಫ್ಲ್ಯಾಷ್ ಆದಾಗಲೆಲ್ಲ ಅವು ಒಡೆಯುವ ಸ್ಥಳದಲ್ಲಿ ಒಂದು ವಿಚಿತ್ರ ಬೆಳುಪು ಕಾಣಿಸ್ತಾ ಇದೆ.

ನನಗೆ ಅಯ್ಯಪ್ಪ ನೆನಪಾದ. ಪಿಯುಸಿಯ ದಿನಗಳಲ್ಲಿ ಅವನ ಹತ್ತಿರವಿದ್ದ ಕೀಬೋರ್ಡ್ ನೆನಪಾಯಿತು. ಹೀಗೇ ಮಳೆ ಸುರಿಯುತ್ತಿದ್ದ ಸಂಜೆಗಳಲ್ಲಿ ಅವರ ಮನೆಯ ವರಾಂಡಾದಲ್ಲಿ